**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.789/2026**

ಪಿರ್ಯಾದುದಾರರು:- ಸಂಚಾರ ಪೊಲೀಸರು, ಹೊಸಕೋಟೆ

**ವಿರುದ್ಧ**

ಆರೋಪಿ:- ಚೇತನ ಜಿ,
ಬಿನ್ ಗೋವಿಂದಪ್ಪ,
ವಯಸ್ಸುಃ 23 ವರ್ಷ,
ವಾಸಃ ನಂ.44ದ 12ನೇ ಕ್ರಾಸ್,
ಅಯ್ಯಪ್ಪ ಲೇಔಟ್,
ಟಿ.ಡಿ.ಬೆಂಗಳೂರು ಸಿಟಿ,

**ಆಪಾದನೆ**

ಶ್ರೀಮತಿ. ಶಿಲ್ಪಶ್ರೀ ಎನ್. ಎಸ್ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿನಾಂಕ- 08.12.2025 ರಂದು ಸಂಜೆ ಸುಮಾರು 5-00 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ಸಂಚಾರ ಪೊಲೀಸ್ ಠಾಣಾ ಸರಹದ್ದು. ಚಾ.ಸಾ.2 ರವರು ತಮ್ಮ ಹೆಂಡತಿ ಚಾ.ಸಾ.3 ರವರಿಗೆ ಮಂಡಿ ನೋವಿಗೆ ಚಿಕಿತ್ಸೆಯನ್ನು ಕೊಡಿಸಲು ತಮ್ಮ ಊರಾದ ಮಾಲೂರು ತಾಲ್ಲೂಕು ಬೆಳ್ಳಾಗಿ ಗ್ರಾಮದಿಂದ ಹೊಸಕೋಟೆ ತಾಲ್ಲೂಕು ಭೀಮಾಪುರಕ್ಕೆ ಹೋಗಲು ಚಿಕ್ಕನಳ್ಳಿ, ಗೇಟ್ ಮೂಲಕ KA-08-W-6936 TVS XL ದ್ವಿ ಚಕ್ರ ವಾಹನದಲ್ಲಿ ಹೋಗಿದ್ದು, ಚಿಕಿತ್ಸೆ ಕೊಡಿಸಿಕೊಂಡು ವಾಪಸ್ಸು ತಮ್ಮ ಊರಾದ ಬೆಳ್ಳಾವಿ ಗ್ರಾಮಕ್ಕೆ ಹೋಗಲು ಹೊಸಕೋಟೆ ತಾಲ್ಲೂಕು ನಂದಗುಡಿ ಹೋಬಳಿ ಚಿಕ್ಕನಳ್ಳಿ, ಗೇಟ್ ಬಳಿ ಬಂದು ಎನ್ ಹೆಚ್-75 ರಸ್ತೆ, ಕೋಲಾರ ಕಡೆಯಿಂದ ಬೆಂಗಳೂರು ಕಡೆಗೆ ಬರುವ ರಸ್ತೆಯನ್ನು ಕ್ರಾಸ್ ಮಾಡಿಕೊಂಡು ಚಿಕ್ಕನಳ್ಳಿ, ಗೇಟ್ ನಿಂದ ಮಾಲೂರು ಕಡೆಗೆ ಹೋಗುವ ರಸ್ತೆಯ ಕಡೆಗೆ ಹೋಗುತ್ತಿದ್ದಾಗ ಅದೇ ವೇಳೆಗೆ ಎನ್.ಹೆಚ್.75 ರಸ್ತೆ ಕೋಲಾರ ಕಡೆಯಿಂದ ಬೆಂಗಳೂರು ಕಡೆಗೆ ಬರುತ್ತಿದ್ದ ಆರೋಪಿಯಾದ ನೀವು ಚಾಲನೆ ಮಾಡಿಕೊಂಡು ಬರುತ್ತಿದ್ದ KA-04-MK-4412 ಮೋಟಾರ್ ಸೈಕಲ್ ಅನ್ನು ವೇಗವಾಗಿ ಹಾಗೂ ಅಜಾಗೂರಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾ.ಸಾ.2 ರವರು ಚಾ.ಸಾ.3 ರವರನ್ನು ಹಿಂಬದಿಯಲ್ಲಿ ಕೂಡಿಸಿಕೊಂಡು

ರಸ್ತೆಯನ್ನು ಕ್ರಾಸ್ ಮಾಡುತ್ತಿದ್ದ KA-08-W-6936 TVS XLನ ಎಡಭಾಗದ ಮಧ್ಯೆ ಭಾಗಕ್ಕೆ ಡಿಕ್ಕಿ ಹೊಡೆದು, ಚಾ.ಸಾ.1 ರವರು ಅದೇ ಸ್ಥಳದಲ್ಲಿ ರಸ್ತೆಯ ಪಕ್ಕದಲ್ಲಿ ನಿಲಿಸಿಕೊಂಡಿದ್ದ. KA-02-AJ-3681 ಕಾರಿನ ಬಲಭಾಗದ ಹಿಂಭಾಗದ ಡೋರ್ ಗೆ ಡಿಕ್ಕಿ ಹೊಡೆದು ಅಪಘಾತ ಮಾಡಿ, ಅಪಘಾತದ ನಂತರ ಆರೋಪಿ ಸ್ಥಳದಿಂದ ಬೈಕ್ ತೆಗೆದುಕೊಂಡು ಹೋಗಿದ್ದು, ಪರಿಣಾಮ ಚಾ.ಸಾ.2 ರವರ ದೇಹದ ಮೇಲೆ ಸಾಮಾನ್ಯ ಸ್ವರೂಪದ ಗಾಯಗಳು ಹಾಗೂ ಚಾ.ಸಾ.3 ರವರ ದೇಹದ ಮೇಲೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ ಎಂದು ಆರೋಪಿಸಲಾಗಿದೆ.

ಅಪಘಾತವಾದ ನಂತರ KA-04-MK-4412 ಮೋಟಾರ್ ಸೈಕಲ್ ಚಿನು ನೀವು ನಿಯಮ ಉಲ್ಲಂಘಿಸಿ ಸ್ಥಳದಿಂದ ತೆಗೆದುಕೊಂಡು ಹೋಗಿರುವುತ್ತೀರಿ ಎಂದು ಆರೋಪಿಸಲಾಗಿದೆ.

ಆ ಮೂಲಕ ನೀವು ಭಾರತೀಯ ನಾಗರೀಕ ಸುರಕ್ಷಾ ಅಧಿನಿಯಮ ಕಲಂ. 281, 125(ಎ), 125(ಬಿ) ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ. 187, 134(ಎ) ಮತ್ತು (ಬಿ) ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?
ಉತ್ತರ:

ಪ್ರಶ್ನೆ2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರ:

ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ:11.06.2026 ರಂದು ಧೃಢೀಕರಿಸಿದ್ದೇನೆ.

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**